

ಎಡದಿಂದ ಬಲಕ್ಕೆ:

1. ಹೆಸರಲ್ಲಿ ಅವನು ಭೂಮಿಗೇ ಒಡೆಯ (4)
3. ಪದರಗಳನ್ನು ಬಿಡಿಸುವ ಕೆಲಸವೇ ಅತ್ಯಂತ ಮುಖ್ಯ (3)
4. ಮೂಲೆಗುಂಪು ಆಗಲು ಕಾರಣ ಭಾರೀ ಸೊಕ್ಕು (3)
6. ಅನ್ಯ ದೇಶೀಯರೆಂದರೆ ಅಲ್ಲಿ ಅಗೌರವ (4)
8. ಆಕೆಯ ಕೇಶರಾಶಿ ಗಮನ ಸೆಳೆವಂತೆ ಸುಂದರ (4)
10. ನೋವಿನ ಅಪಾಯ ತಪ್ಪಿಸಲು ಹೊಸದೊಂದು ತಂತ್ರ (4)
12. ದುಡಿದು ಸಾಕಾದವರನ್ನು ತಣಿಸಿದ 'ಅಮೃತ ಮೂಲ' (4)
16. ಆ ಊರಲ್ಲಿ ಕಂಡ ಕಂಡಲ್ಲೆಲ್ಲ ಅದೇ ಸಾಗರ (3)
17. ಸಮರವೇ ಸ್ವಲ್ಪ ಹೆಚ್ಚು ಕಡಿಮೆ; ಹಿಂದು ಮುಂದು, ಅಷ್ಟೆ (3)
18. ಸದಾ ಕಪಿಗಳ ಕಾಟದಿಂದ ಆ ಊರು ಕೆಟ್ಟದಾಗಿ ವಿಖ್ಯಾತ (4)

ಮೇಲಿಂದ ಕೆಳಕ್ಕೆ:

1. ಅವರ ಅನ್ಯೋನ್ಯತೆ ಬೇರಾರಲ್ಲೂ ಇಲ್ಲ (3)
2. ಮಾಸಾಶನದ ಸಮಸ್ಯೆ ಬಗೆಹರಿಯಿತು ಬಿಡಿ (3)
3. ಸಂಪ್ರದಾಯದಂತೆ ಹಂಚಿದ ದೇವಾರ್ಪಿತ ವಸ್ತು (3)
5. ಪಾಲಕರನ್ನು ಕಂಡೊಡನೆಯೇ ರೋಮಾಂಚನ (3)
6. ಪ್ರಾಧ್ಯಾಪಕನ ಕೆಲಸ ಬೋಧನೆಯೇ ತಾನೇ? (4)
7. ಬಹು ಬೆಲೆಯ ಹರಳುಗಳು ಮೂರು (4)
8. ಪಾಸು ಆಗಲು ಬೇಕಾದದ್ದರ ಆಚೆ-ಈಚೆ (4)
9. ಬಾಳಿಕೆ ಬರಬಹುದೇ ಈ ಶರೀರ? (4)
11. ಪತ್ತೇದಾರಿಕೆಯ ಹೆಸರಲ್ಲಿ ಪಾಪಕಾರ್ಯವೇ? (3)
13. ದೇವ ಸನ್ನಿಧಿಗೆ ಕೂಡಲೇ ಓಡು (3)
14. ಕೊಳ್ಳಲಿಕ್ಕೆ ಹೋದಲ್ಲಿ ಬರೀ ಅಲುಗಾಟ (3)
15. ದೂರವಿದ್ದರೂ ಎದುರು ನಿಲ್ಲುವುದೆಂದರೆ? (3)

### ಪದಬಂಧ 29-08-2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಕನವರ; 3. ಕಾನಡ; 4. ಡಾಮರ; 6. ಸುರಲೋಕ; 7. ಪಾನಕ; 9. ಮಣಿಸು; 11. ರವಣ; 13. ನವೀನ; 15. ಸಂವತ್ಸರ; 17. ನರೇಶ; 18. ಜನಕ; 19. ಯಜಮಾನಿ.

ಮೇಲಿಂದ ಕೆಳಕ್ಕೆ:

1. ಕಡಸು; 2. 'ರಡಾಕ' (ಕಡಾರ ಬುಡಮೇಲು); 3. ಕಾನನ; 5. ರಮಣಿ; 7. ಪಾಲುದಾರ; 8. ಕಡಿವಾಣ; 9. ಮತಿಹೀನ; 10. ಸುಯೋಧನ; 12. ವರ್ಧನ; 14. ವೀಕ್ಷಕ; 15. ಸಂಶಯ; 16. ರಜನಿ.

# ಪ್ರಶ್ನಾಂಕಣ

## ಮೂಲವಸ್ತು-ಸೃಷ್ಟಿ ಹೇಗೆ?

'ಮೂಲವಸ್ತು' ಅದಕ್ಕೇ 'ಧಾತು' ಎಂದೂ ಹೆಸರು. ನಿಸರ್ಗದಲ್ಲಿರುವ ಧಾತುಗಳ ಸಂಖ್ಯೆ ತೊಂಬತ್ತೆರಡು. ಇಡೀ ವಿಶ್ವದಲ್ಲಿರುವ ಸಕಲ ಸಜೀವಿ-ನಿರ್ಜೀವಿಗಳನ್ನು ನಿರ್ಮಿಸಿರುವ 'ಇಟ್ಟಿಗೆ'ಗಳು ಅವೇ. ಜಲಜನಕದಿಂದ ಯುರೇನಿಯಂವರೆಗಿನ ಈ ಧಾತುಗಳದೇ ನಾನಾ ಸಂಯೋಜನೆಗಳಿಂದ ಸುಮಾರು ಮೂವತ್ತು ಲಕ್ಷ ವಿಧಗಳ ಸಂಯುಕ್ತ ವಸ್ತುಗಳು ಪ್ರಕೃತಿಯಲ್ಲಿ ಸೃಷ್ಟಿಗೊಂಡಿವೆ; ಅಸ್ತಿತ್ವದಲ್ಲಿವೆ.

ವಿಸ್ಮಯ ಏನೆಂದರೆ ಮೂಲತಃ ವಿಶ್ವದಲ್ಲಿದ್ದ ಧಾತುಗಳು ಎರಡೇ ಎರಡು: 'ಜಲಜನಕ ಮತ್ತು ಹೀಲಿಯಂ' ಅವುಗಳಲ್ಲೂ ಜಲಜನಕದ್ದೇ ಶೇಕಡ ಎಂಬತ್ತು ಭಾಗ. ಇವೆರಡೇ ಧಾತುಗಳನ್ನು ಬಳಸಿ ನಕ್ಷತ್ರಗಳನ್ನು ರೂಪಿಸಿ, ಅವುಗಳ ಅಂತರಾಳದಲ್ಲಿ ಉಳಿದೆಲ್ಲ ಧಾತುಗಳನ್ನು ನಿಸರ್ಗ ಸೃಜಿಸುತ್ತಿದೆ.

ಜಲಜನಕ ಮತ್ತು ಹೀಲಿಯಂಗಳ ಮಹಾನ್ ರಾಶಿಗಳಿಂದ ನಕ್ಷತ್ರಗಳು ಮೈದಳೆಯುತ್ತವೆ. ನವಜಾತ ತಾರೆಯೊಂದು ನೂರಾರು ಕೋಟಿ ವರ್ಷಗಳಲ್ಲಿ 'ಸ್ಥಿರ ಸ್ಥಿತಿ' ತಲುಪುತ್ತದೆ. ಆ ವೇಳೆಗೆ ಅದರ ಅಂತರ್ಯದ ಉಷ್ಣತೆ ಹದಿನೈದು-ಇಪ್ಪತ್ತು ದಶಲಕ್ಷ ಡಿಗ್ರಿಯನ್ನು ಮುಟ್ಟಿರುತ್ತದೆ. ನಕ್ಷತ್ರ ಗರ್ಭದ ಇಂತಹ ಕಲ್ಪನಾತೀತ ತಾಪ ಮತ್ತು ಒತ್ತಡಗಳಲ್ಲಿ ಜಲಜನಕದ ಪರಮಾಣುಗಳು ಬೆಸೆದು ಹೀಲಿಯಂ, ಹೀಲಿಯಂನಿಂದ ಲೀಥಿಯಂ, ಲೀಥಿಯಂನಿಂದ ಬೋರಾನ್... ಹಾಗೆ ಇಪ್ಪತ್ತಾರನೆಯ ಧಾತು ಕಬ್ಬಿಣದವರೆಗೆ ರೂಪುಗೊಳ್ಳುತ್ತವೆ. ಆ ವೇಳೆಗೆ ತಮ್ಮ ಬದುಕಿನ ಅಂತ್ಯವನ್ನು ತಲುಪುವ ನಮ್ಮ ಸೂರ್ಯನಂಥ ಸಾಧಾರಣ ನಕ್ಷತ್ರಗಳು 'ಗ್ರಹೀಯ ನೀಹಾರಿಕೆ'ಗಳಾಗಿ (ಚಿತ್ರ-1) ತಮ್ಮೆಲ್ಲ ದ್ರವ್ಯವನ್ನು ಎರಚಿ ಶ್ವೇತಕುಬ್ಜಗಳಾಗಿ ತಣ್ಣಗಾಗುತ್ತವೆ. ಕಬ್ಬಿಣಕ್ಕಿಂತ ಅಧಿಕ ಭಾರದ ಎಲ್ಲ ಧಾತುಗಳು ಅಸಾಧಾರಣ ದ್ರವ್ಯರಾಶಿಯ ಬೃಹತ್ ನಕ್ಷತ್ರಗಳಿಂದ ತಯಾರಾಗುತ್ತವೆ. ಅಂತಹ ತಾರೆಗಳು 'ಸೂಪರ್ ನೋವಾ' ಮಹಾ ಸ್ಫೋಟದಲ್ಲಿ ಮೃತವಾಗುತ್ತವೆ (ಚಿತ್ರ-2) ಆ ಸಿಡಿತದಲ್ಲಿ ತಾರೆಯ ಹೊರಪದರಗಳ ಎಲ್ಲ ದ್ರವ್ಯವೂ ಚದರಿ ತಾರಾ ಗರ್ಭದ ಅತಿ ಸಾಂದ್ರ, ಅತಿ ಬಿಸಿಯ ಅವಶೇಷ 'ನ್ಯೂಟ್ರಾನ್ ತಾರೆ'ಯಾಗಿ ಉಳಿಯುತ್ತದೆ. 15-20 ಕಿ.ಮೀ. ವ್ಯಾಸದ, ಮಾತ್ರೆಯಷ್ಟು ಗಾತ್ರವೇ ಒಂದು ಸಾವಿರ ಟನ್ ತೂಗುವಂಥ ಸಾಂದ್ರತೆಯ, ಐವತ್ತು ಶತಕೋಟಿ ಡಿಗ್ರಿ ಉಷ್ಣತೆಯ ಇಂತಹ ನಕ್ಷತ್ರಗಳು ಡಿಕ್ಕಿ ಹಾಕಿ ಭಗ್ನಗೊಂಡಾಗ ಆ ಮಹಾಪ್ರಳಯ ಸನ್ನಿವೇಶದಲ್ಲಿ ಅತಿ ಭಾರ ಧಾತುಗಳು ರೂಪುಗೊಂಡು ಎರಚಿಹೋಗುತ್ತವೆ. ಅಂತರಿಕ್ಷದ ದ್ರವ್ಯ ಸಾಮ್ರಾಜ್ಯದಲ್ಲಿ ಬೆರೆತು ಹೋಗುತ್ತವೆ.




ಸೋಜಿಗದ ಯೋಗಾಯೋಗ ಏನೆಂದರೆ ನಿಸರ್ಗದ ಸಕಲ ಧಾತುಗಳೂ ಬೆರೆತಿದ್ದ ಒಂದು ದ್ರವ್ಯ ಸಾಮ್ರಾಜ್ಯದಿಂದ ನಮ್ಮ ಸೌರವ್ಯೂಹ ಮೈದಳೆದಿದೆ. ಮತ್ತೂ ಅದ್ಭುತದ ಕಾಕತಾಳೀಯದಿಂದ ಅಷ್ಟೂ ಧಾತುಗಳು ಭೂಮಿಯಲ್ಲಿ ದಾಸ್ತಾನುಗೊಂಡಿವೆ. ಎಂಥ ವಿಸ್ಮಯ! ಹೌದಲ್ಲ?

■ ಎನ್. ವಾಸುದೇವ್